ಬೆಂಗಳೂರು ಫುಟಬಾಲ್ ಕ್ರೀಡಾಂಗಣ

186 - ಶ್ರೀಮತಿ ಡಿ.ಜಿ. ಹೇಮಾವತಿ (ಶಾಂತಿನಗರ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಕರ್ನಾಟಕ ಸರ್ಕಾರವು ಬೆಂಗಳೂರು ಫುಟಬಾಲ್ ಕ್ರೀಡಾಂಗಣಕ್ಕೆ ಹುಲ್ಲುಹಾಸಿಗೆ ಮಾಡಲು ಕ್ರಮಕೈಗೊಂಡಿದೆಯೇ?*

2) *ಹಾಗಿದ್ದರೆ ಅದರ ದರಪಟ್ಟಿಯ ಅಂದಾಜು ಎಷ್ಟು ಮತ್ತು ಇದುವರೆಗೂ ಖರ್ಚಾಗಿರುವ ಹಣ ಎಷ್ಟು?*

3) *ಹಾಗಿದ್ದರೆ ರಾಷ್ಟ್ರೀಯ ಕ್ರೀಡೆಗೆ ಸಮಯಕ್ಕೆ ರೆಡಿಯಾಗುವುದೇ?*

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

1) ಹೌದು.

2) ದರಪಟ್ಟಿಯ ಮೊಬಲಗು ರೂ.3.00 ಲಕ್ಷಗಳು ಇದುವರೆವಿಗೂ ಗುತ್ತಿಗೆದಾರರಿಗೆ ಹಣ ಪಾವತಿ ಆಗಿರುವುದಿಲ್ಲ.

3) ಹೌದು.

ಶ್ರೀಮತಿ ಡಿ. ಬಿ. ಹೇಮಾವತಿ : ಇಷ್ಟು ವರ್ಷಗಳವರೆಗೆ ಅಲ್ಲಿ ಏನೂ ಕೆಲಸ ನಡೆಯುತ್ತಿರಲಿಲ್ಲ, ಈಗ ನಮ್ಮಮಂತ್ರಿಗಳು ಬಂದ ಮೇಲೆ, ಸ್ವಲ್ಪ ಹಣವನ್ನು ಕೊಟ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ, ಇನ್ನು ಹೆಚ್ಚಿಗೆ ಹಣವನ್ನು ಕೊಟ್ಟು ಒಳ್ಳೆಯ ರೀತಿಯಾಗಿ ಕೆಲಸ ಮಾಡಲು ಸಹಕರಿಸಬೇಕೆಂದು ಕೇಳುತ್ತೇನೆ.

ಶ್ರೀ ಅಜಯ್‌ಕುಮಾರ್ ಸರ್‌ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರು, ಬೆಂಗಳೂರಿನಲ್ಲಿ ಒಂದು ಹಾಕಿ ಸ್ಟೇಡಿಯಂ ಮತ್ತೊಂದು ಫುಟಬಾಲ್ ಸ್ಟೇಡಿಯಂ, ಈ ಎರಡು ಸ್ಟೇಡಿಯಮ್‌ಗಳು ಬಹಳ ವರ್ಷಗಳಿಂದ ಅಪೂರ್ಣವಾಗಿ ಅವು ಉಳಿದಿದ್ದವು. ನಾವು ಈ ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುವುದರಿಂದ ಈ ಎರಡು ಸ್ಟೇಡಿಯಮ್‌ಗಳನ್ನು ಪೂರ್ಣಗೊಳಿಸಬೇಕೆಂದು ಈಗಾಗಲೇ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಫುಟಬಾಲ್ ಸ್ಟೇಡಿಯಂಗೆ ಕನಿಷ್ಟ ಪಕ್ಷ 106 ಲಕ್ಷರೂಪಾಯಿಗಳನ್ನು ನಾವು ಖರ್ಚು ಮಾಡುತ್ತಿದ್ದೇವೆ, ಅದರ ಪೈಕಿ ಈಗಾಗಲೇ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಉಳಿದ ಹಣವನ್ನು ಮೇ ತಿಂಗಳಲ್ಲಿ ಏನು ರಾಷ್ಟ್ರೀಯ ಕ್ರೀಡೆಗಳನ್ನು ನಡೆಸುತ್ತೇವೆ, ಅಷ್ಟು ಹೊತ್ತಿಗೆ ಈ ಪೂರ್ಣ ಹಣವನ್ನು ಖರ್ಚು ಮಾಡಿ ಆ ಸ್ಟೇಡಿಯಂ ಪೂರ್ತಿಗೊಳಿಸುವುದಕ್ಕೆ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಅರಗಜ್ಞಾನೇಂದ್ರ : ಸನ್ಮಾನ್ಯ ಉಪಾಧ್ಯಕ್ಷರೆ, ಈ ತಾಲ್ಲೂಕುಮಟ್ಟದ ಕ್ರೀಡಾಂಗಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಜಮೀನುಗಳನ್ನು ನಿಮಗೆ ಹಸ್ತಾಂತರ ಮಾಡಿದ್ದೇವೆ, ಅದಕ್ಕೆ ಹಣವನ್ನು ನಿಗಧಿ ಮಾಡಿಲ್ಲ, ಜಾಸ್ತಿ ಹಣವನ್ನು ನಿಗಧಿ ಮಾಡಿದರೆ ಬಹಳಷ್ಟು ಆ ಕೆಲಸವನ್ನು ಮಾಡುವುದಕ್ಕೆ

ಸಾಧ್ಯವಾಗುತ್ತದೆ; ಎಲ್ಲೋ ಒಂದು ಲಕ್ಷ, ಐವತ್ತು ಸಾವಿರ ಕೊಟ್ಟರೆ ಆಗುವುದಿಲ್ಲ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಇಂಥ ಒಂದು ಸ್ಟೇಡಿಯಂ ಮಾಡುವುದಕ್ಕೆ ನಗರದ ಮಧ್ಯೆ ಆಗುವುದಿಲ್ಲ. ಇರುವಂಥ ಬೆಲೆಬಾಳುವಂಥ ಆರು ಎಕರೆ ಜಮೀನನ್ನು ನಿಮ್ಮ ಇಲಾಖೆಗೆ ಕಳೆದ ವರ್ಷ ಹಸ್ತಾಂತರ ಮಾಡಿದ್ದೇವೆ. ದಯಮಾಡಿ ಈ ವರ್ಷ ಅದನ್ನು ಮಾಡಲು ಏನಾದರೂ ಕಾರ್ಯಕ್ರಮ ಕೈಗೊಳ್ಳುತ್ತೀರಾ?

ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರೆ, ಈ ತಾಲ್ಲೂಕು ಮಟ್ಟದ ಕ್ರೀಡಾಂಗಣಗಳು ಏನಿದ್ದಾವೆ, ಇವು ಮೊದಲು ಸ್ಟೇಟ್ ಸೆಕ್ಟಾರ್‌ನಲ್ಲಿದ್ದವು, ಇಡೀ ರಾಜ್ಯದಲ್ಲಿ ನಾವೇನು 73 ರಿಂದ 80 ಕ್ರೀಡಾಂಗಣವನ್ನು ಏನು ಕೈಗೊಂಡಿದ್ದೇವೆ ಅವುಗಳ ಪೈಕಿ ಕೇವಲ 13 ಸ್ಟೇಟ್ ಸೆಕ್ಟಾರ್‌ನಲ್ಲಿದ್ದಾವೆ ಉಳಿದವೆಲ್ಲಾ ಜಿಲ್ಲಾಪಂಚಾಯತ್‌ನಲ್ಲಿ ಬರುತ್ತವೆ. ಜಿಲ್ಲಾಪಂಚಾಯತ್‌ನವರು ಅವರ ಆಯವ್ಯಯದಡಿಯಲ್ಲಿ ಹಣವನ್ನು ನಿಗದಿ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ನಾವು ಸ್ಟೇಟ್ ಸೆಕ್ಟಾರ್‌ನಿಂದ ಹಣವನ್ನು ಬಿಡುಗಡೆ ಮಾಡುವುದಿಲ್ಲ, ಅವರಿಗೆ ಜಿಲ್ಲಾಪಂಚಾಯತ್‌ನಿಂದ ಹಣ ಬಿಡುಗಡೆಯಾಗುತ್ತದೆ, ಅವರು ತಮ್ಮ ಆಯವ್ಯಯದಲ್ಲಿ ಹಣವನ್ನು ಇಟ್ಟುಕೊಳ್ಳಬೇಕಾಗುತ್ತದೆ.

ಶ್ರೀ ಅರಗಜ್ಞಾನೇಂದ್ರ : ಅಸಿಸ್ಟೆಂಟ್ ಕಮಿಷನರ್‌ವರ ಅಧ್ಯಕ್ಷತೆಯಲ್ಲಿ ಸ್ಟೇಡಿಯಂ ಒಂದು ಕಮಿಟಿ ಮಾಡಿದ್ದೀರಿ, ಸರಕಾರದಿಂದಲೇ ನೇರವಾಗಿ ಅದಕ್ಕೆ ಹಣಬಿಡುಗಡೆಯಾಗಬೇಕೆಂದು ಜಿಲ್ಲಾಪಂಚಾಯತ್‌ನವರು ಹೇಳುತ್ತಾರೆ, ದಯಮಾಡಿ ತಮ್ಮ ಇಲಾಖೆಯ ವತಿಯಿಂದ ಸರಿಯಾದ ನಿರ್ದೇಶನ ಹೋಗಬೇಕು.

3.40 ಪಿ.ಎಂ

ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರೆ, ಬಹಳಷ್ಟು ಕಡೆ ಸ್ಟೇಡಿಯಂಗಳ ನೋಡುತ್ತಿದ್ದೇವೆಂದರೆ, ಕೇಂದ್ರ ಸರ್ಕಾರದಿಂದ ಬರತಕ್ಕಂಥ ಹಣವಾಗಲಿ, ಅಥವಾ ಸ್ಥಳೀಯವಾಗಿ ಅವರು ಏನು ಕಾಂಟ್ರಿಬ್ಯೂಷನ್ ಮಾಡಬೇಕು, ಇದು ಸರಿಯಾದ ವೇಳೆಯಲ್ಲಿ ಆಗುತ್ತಿಲ್ಲ. ಅದರಿಂದ ಬಹಳಷ್ಟು ಸ್ಟೇಡಿಯಂಗಳು ಇನ್‌ಕಂಪ್ಲೀಟ್ ಆಗಿ ಉಳಿಯುತ್ತಿವೆ. ಈ ಒಂದು ಯೋಜನೆ ಏನಿದೆ, ನಾವು ಇದನ್ನು ನೇರವಾಗಿ ಸ್ಟೇಟ್ ಸೆಕ್ಟಾರ್‌ಗೆ ತೆಗೆದುಕೊಂಡು ಕಾರ್ಯಕ್ರಮವನ್ನು ಬೇಗನೆ ಮುಗಿಸಬೇಕೆಂದು ಇದರ ಬಗ್ಗೆ ಈಗಾಗಲೇ ಸರ್ಕಾರ ಯೋಚನೆ ಮಾಡುತ್ತಿದೆ.

ಶ್ರೀ ಡಿ. ವಿ. ಸದಾನಂದ ಗೌಡ : ಮಾನ್ಯ ಉಪಾಧ್ಯಕ್ಷರೆ, ಕೇಂದ್ರ ಸರ್ಕಾರದಿಂದ ಬರುವಂಥ ಅನುದಾನ ಬರದ ಕಾರಣ ಹಲವಾರು ಕಡೆ ಸ್ಟೇಡಿಯಂಗಳಲ್ಲಿ ತಮ್ಮ ಕೆಲಸಗಳನ್ನು ನಿಲ್ಲಿಸಿರುವಂಥದ್ದು ತಮ್ಮ ಗಮನಕ್ಕೆ ಬಂದಿದೆಯೆಂದು ನಾನು ಭಾವಿಸುತ್ತಿದ್ದೇನೆ. ಇಂಥ ಸಂದರ್ಭದಲ್ಲಿ ಈ ಕೆಲಸ ನಿಲ್ಲಿಸಿರುವಂಥದ್ದು, ಕೆಲವು ಕಡೆ ಇನ್ನೂ ಕೂಡ ಜಾಗ ಸಿಗದೆ, ಅಲ್ಲಿ ರಾಜ್ಯ ಸರ್ಕಾರದಿಂದ ಸ್ವಲ್ಪ ಹಣವನ್ನು ಜಿಲ್ಲಾ ಪಂಚಾಯತ್ ಮುಖಾಂತರ ತಾವು ಎಲ್ಲಾ ಬಿಡುಗಡೆ ಮಾಡಿದ್ದೀರಿ. ಆದ್ದರಿಂದ ಸ್ಟೇಡಿಯಂಗೆ ಜಾಗ ಸಿಗದೆ ಇರುವ ಕಡೆಗೆ ಬಿಡುಗಡೆ ಮಾಡಿದ ಮೊತ್ತವನ್ನು ಎಲ್ಲಿ ಜಾಗಗಳು ಆಗಿ ಕೆಲಸ ಅರ್ಧದಲ್ಲಿ ನಿಂತಿದೆಯೋ, ಅಲ್ಲಿಗೆ ಆ ಹಣವನ್ನು ಡೈವರ್ಟ್ ಮಾಡಲಿಕ್ಕೆ ಸರ್ಕಾರ ಏನಾದರೂ ಆಲೋಚನೆ ಮಾಡಿದೆಯೇ?

ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಉಪಾಧ್ಯಕ್ಷರೆ,ಮಾನ್ಯ ಸದಸ್ಯರು ಹೇಳಿದಂಥ ಕೆಲವೊಂದು ದೃಷ್ಟಾಂತಗಳು ಇವೆ. ಕೆಲವೊಂದು ಸ್ಟೇಡಿಯಂಗಳಿಗೆ ನಾವು ಹಣ ಬಿಡುಗಡೆ ಮಾಡಿದ್ದೇವೆ. ಆದರೆ ಅಲ್ಲಿ ಜಾಗದ ತೊಂದರೆ ಇರುವುದರಿಂದ ಬಿಡುಗಡೆ ಮಾಡಿದ ಹಣ ಉಪಯೋಗ ಆಗಿಲ್ಲ. ಎಲ್ಲಿ ಈಗಾಗಲೇ ಸ್ಟೇಡಿಯಂಗಳ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ ಅಲ್ಲಿಗೆ ಈ ಹಣವನ್ನು ಉಪಯೋಗ ಮಾಡಲಿಕ್ಕೆ ನಿರ್ದಿಷ್ಟವಾದ ಆದೇಶವನ್ನು ಕೂಡ ಕೊಟ್ಟಿದ್ದೇವೆ. ನಂತರ ಮಾನ್ಯ ಸದಸ್ಯರಿಗೆ ಇನ್ನೊಂದು ವಿಷಯ ತಿಳಿಸುವುದೇನೆಂದರೆ ಎಲ್ಲೆಲ್ಲಿ ಸ್ಟೇಡಿಯಂಗಳ ಕೆಲಸ ಇನ್‌ಕಂಪ್ಲೀಟ್ ಆಗಿವೆ, ಲೋಕಸಭಾ ಸದಸ್ಯರಿಗೆ ಒಂದೊಂದು ಕೋಟಿ ರೂಪಾಯಿಗಳನ್ನು ಕೇಂದ್ರ ಸರ್ಕಾರದಿಂದ ಅವರವರ ಕ್ಷೇತ್ರದ ಅಭಿವೃದ್ಧಿ ಕೆಲಸಗಳನ್ನು ಮಾಡಿಸುವುದಕ್ಕೆ ಕೊಟ್ಟಿರುತ್ತಾರೆ. ನಾನು ಎಲ್ಲಾ ಲೋಕಸಭಾ ಸದಸ್ಯರಿಗೆ ಪತ್ರವನ್ನು ಸಹ ಬರೆದಿದ್ದೇನೆ. ಕೆಲವು ಕಡೆ ಲೋಕಸಭಾ ಸದಸ್ಯರು ಈ ಸ್ಟೇಡಿಯಂಗಳ ಕೆಲಸಕ್ಕೆ ದುಡ್ಡನ್ನು ಸಹ ಕೊಟ್ಟಿದ್ದಾರೆ. ಅವರು ಏನು ಹಣ ಕೊಟ್ಟಿದ್ದಾರೆ ಅದರಿಂದ ಸ್ಟೇಡಿಯಂಗಳ ಕೆಲಸವನ್ನು ಮುಗಿಸಲಿಕ್ಕೆ ಕೂಡ ಸಾಧ್ಯವಾಗಿದೆ. ಆದ್ದರಿಂದ ಈ ಸ್ಟೇಡಿಯಂಗಳ ಕೆಲಸವನ್ನು ಸಾಧ್ಯವಾದಷ್ಟು ತೀವ್ರವಾಗಿ ಮುಗಿಸಲಿಕ್ಕೆ ನಾವು ಎಲ್ಲಾ ಪ್ರಯತ್ನವನ್ನು ಮಾಡುತ್ತಿದ್ದೇವೆ.

ರಾಜ್ಯ ಸರ್ಕಾರದ ಆರ್ಥಿಕ ನೀತಿ ಕುರಿತು

186 - ಶ್ರೀ ಎಸ್. ರಾಜೇಂದ್ರನ್ (ಕೆ.ಜಿ.ಎಫ್.) : ಮಾನ್ಯ ಉಪಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರವು ಆರ್ಥಿಕ ನೀತಿಯನ್ನು ರೂಪಿಸಿದೆಯೇ?

ಆ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಇದ್ದಲ್ಲಿ ಇದರ ಸ್ಥೂಲ ರೂಪು ರೇಷೆಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು) :

ಅ) (ಆ) ಮತ್ತು ಇ) ಹೌದು. ಒಂದು ರಾಜ್ಯ ಸರ್ಕಾರದ ಆರ್ಥಿಕ ನೀತಿಯು ಅದರ ತೆರಿಗೆ, ಸಾಲ ಮತ್ತು ವೆಚ್ಚದ ನೀತಿಗಳಲ್ಲಿ ಪ್ರತಿಬಿಂಬಿತವಾಗುತ್ತಿದೆ. ಇವುಗಳನ್ನು (ಅಂದರೆ ತೆರಿಗೆ, ಸಾಲ ಮತ್ತು ವೆಚ್ಚದ ನೀತಿಗಳನ್ನು) ಉಪ ಮುಖ್ಯಮಂತ್ರಿಯವರ ಆಯವ್ಯಯ ಭಾಷಣ1997-98ರಲ್ಲಿ ವಿವರಿಸಲಾಗಿದೆ.

ಶ್ರೀ ಎಸ್. ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ನನ್ನ ಪ್ರಶ್ನೆ ಏನೆಂದರೆ, whether economic policy has been formulated by the government? ಅದಕ್ಕೆ ಉತ್ತರ ಏನು ಕೊಟ್ಟಿದಾದರೆಂದರೆ ` Yes. The economic policy of the state government is reflected in the taxation, debt and expenditure policy. ಉಪ ಮುಖ್ಯಮಂತ್ರಿಗಳ ಬಗ್ಗೆ ನನಗೆ ಅಪಾರವಾದ ಪ್ರೀತಿ, ವಿಶ್ವಾಸ, ಗೌರವ ಇದೆ. ಬಜೆಟ್ ಕೂಡ ಬಹಳ ಚೆನ್ನಾಗಿ ಕೊಟ್ಟಿದ್ದಾರೆ. ಐಓಟಿ.